ಜಮೀನನ್ನು ಸಂಸ್ಥೆಯ ವಶಕ್ಕೆ ಪಡೆಯಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಅನುದಾನದ ಲಭ್ಯತೆಯನ್ನು ಆಧರಿಸಿ ಸ್ವಂತ ಕಟ್ಟಡ ನಿರ್ಮಾಣಕ್ಕೆ ಕ್ರಮ ತೆಗೆದುಕೊಳ್ಳಲಾಗುವುದು.

ಬಾಗೇಪಲ್ಲಿ ಸಂಸ್ಥೆಯಲ್ಲಿ ಅಗತ್ಯ ಯಂತ್ರೋಪಕರಣಗಳು ಹಾಗೂ ಸಲಕರಣೆಗಳು ಲಭ್ಯವಿರುತ್ತದೆ. ಗುಡಿಬಂಡೆ ಸಂಸ್ಥೆಯಲ್ಲಿ ಡ್ರೆಸ್ ಮೇಕಿಂಗ್ ವೃತ್ತಿಗೆ ಪ್ರವೇಶವಾಗದ ಕಾರಣ ಈ ವೃತ್ತಿಯನ್ನು ಹೊರತುಪಡಿಸಿ ಉಳಿದ ಎಲ್ಲಾ ವೃತ್ತಿಗಳಿಗೆ ಅಗತ್ಯ ಯಂತ್ರೋಪಕರಣ ಸಲಕರಣೆಗಳನ್ನು ಈಗಾಗಲೇ ಒದಗಿಸಲಾಗಿದೆ.

ವಿಷ್ಣು ಸಮುದ್ರ ಕೆರೆ

32 (03) ಶ್ರೀ ರುದ್ರೇಶ್ ಗೌಡ. ವೈ.ಎನ್. (ಬೇಲೂರು) : ಮಾನ್ಯ ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೇಲೂರಿನಲ್ಲಿರುವ ಪ್ರಖ್ಯಾತ ವಿಷ್ಣು ಸಮುದ್ರ ಕೆರೆಯು ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿರುವುದು ನಿಜವೇ?

ಆ) ಈ ಕೆರೆಯಲ್ಲಿ ವಿಶ್ವಪ್ರಸಿದ್ಧ ಶ್ರೀ ಚನ್ನಕೇಶವ ದೇವಸ್ಥಾನದ ಭಕ್ತಾದಿಗಳಿಗೆ ಸ್ನಾನಕ್ಕಾಗಿ ಸರ್ಕಾರ ಸ್ನಾನಘಟ್ಟ ನಿರ್ಮಿಸಿರುವುದು ನಿಜವೇ?

ಇ) ಹಾಗಿದ್ದಲ್ಲಿ, ಈ ಸ್ನಾನಘಟ್ಟದಲ್ಲಿರುವ ನೀರು ಮಲೀನ ಗೊಂಡಿದ್ದು, ಸ್ನಾನಕ್ಕೆ ಯೋಗ್ಯವಾಗಿಲ್ಲದಿರುವುದು ನಿಜವೇ? ಈ ಕೊಳದಲ್ಲಿ ಹೂಳು ತುಂಬಿದ್ದು, ಪ್ರವಾಸಿಗರ ಸ್ನಾನಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ (ವಿವರ ಒದಗಿಸುವುದು);

ಈ) ಬಂದಿದ್ದಲ್ಲಿ, ಈ ಕೊಳದ ಅಭಿವೃದ್ಧಿಗೆ ಶಾಶ್ವತ ಯೋಜನೆ ರೂಪಿಸುವುದು ಸರ್ಕಾರದ ಕರ್ತವ್ಯ ಅಲ್ಲವೇ? ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ಒದಗಿಸುವುದು)

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು) :

ಅ) ಬೇಲೂರಿನಲ್ಲಿರುವ ಪ್ರಖ್ಯಾತ ವಿಷ್ಣು ಸಮುದ್ರ ಕೆರೆಯು ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

ಆ) ವಿಷ್ಣು ಸಮುದ್ರ ಕೆರೆಯ ಅಂಚಿನಲ್ಲಿ ಪ್ರಸಿದ್ಧ ಶ್ರೀ ಚನ್ನಕೇಶವ ಸ್ವಾಮಿ ದೇವಸ್ಥಾನ ನಿರ್ಮಾಣದ ಸಮಯದಲ್ಲಿಯೇ ಭಕ್ತಾದಿಗಳ ಸ್ನಾನಕ್ಕಾಗಿ ಸ್ನಾನಘಟ್ಟ ನಿರ್ಮಾಣವಾಗಿರುತ್ತದೆ. (ಸಣ್ಣ ನೀರಾವರಿ ಇಲಾಖಾ ವತಿಯಿಂದ ನಿರ್ಮಾಣಗೊಂಡಿರುವುದಿಲ್ಲ.)

ಇ) ಈ ಸ್ನಾನಘಟ್ಟದ ನಿರ್ವಹಣೆ ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಗೆ ಬರದೆ ಇರುವುದರಿಂದ ಮಲೀನತೆ ಬಗ್ಗೆ ಮತ್ತು ಪ್ರವಾಸಿಗರ ಸ್ನಾನಕ್ಕೆ ಅನುಕೂಲತೆಯ ಬಗ್ಗೆ ಪರಿಶೀಲನೆ ನಡೆಸುತ್ತಿಲ್ಲ. ಚನ್ನಕೇಶವಸ್ವಾಮಿ ದೇವಸ್ಥಾನದ ಸಮಿತಿಯವರ ಕೋರಿಕೆಯಂತೆ ಪ್ರತಿ ವರ್ಷ ಚನ್ನಕೇಶವ ಸ್ವಾಮಿ ಜಾತ್ರೋತ್ಸವದ ಸಮಯದಲ್ಲಿ ಸ್ನಾನಘಟ್ಟವನ್ನು ಇಲಾಖೆಯಿಂದ ಸ್ವಚ್ಛಗೊಳಿಸಲಾಗುತ್ತಿದೆ.

ಈ) ಸದರಿ ಸ್ನಾನಘಟ್ಟದ ನಿರ್ವಹಣೆಯು ಈ ಇಲಾಖೆಗೆ ಒಳಪಡದ ಕಾರಣ ಶಾಶ್ವತ ಯೋಜನೆ ರೂಪಿಸುವುದು ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಗೆ ಒಳಪಟ್ಟಿರುವುದಿಲ್ಲ.

ಆಲಮಟ್ಟಿ ಎಡದಂಡೆ ಹಾಗೂ ಬಲದಂಡೆ ಕಾಲುವೆ

28 (52) ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು) : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಲಮಟ್ಟಿ ಎಡದಂಡೆ ಹಾಗೂ ಬಲದಂಡೆ ಉಪ ಕಾಲುವೆಗಳು ಹಾಗೂ ಹೊಲಗಾಲುವೆಗಳು ಸಂಪೂರ್ಣ ಕಳಪೆ ಮಟ್ಟದ್ದಾಗಿದ್ದು, ರೈತರ ಹೊಲಗಳಿಗೆ ಸರಿಯಾಗಿ ನೀರು ಹರಿಯದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು);

ಆ) ಹಾಗಿದ್ದಲ್ಲಿ, ಈ ಕಾಲುವೆಗಳನ್ನು ದುರಸ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಹಾಗಿದ್ದಲ್ಲಿ, ಎಂದಿನಿಂದ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :

ಅ) ಆಲಮಟ್ಟಿ ಎಡದಂಡೆ ಹಾಗೂ ಬಲದಂಡೆ ಕಾಲುವೆಗಳ ಅಡಿಯಲ್ಲಿ ಬರುವ ಉಪಕಾಲುವೆಗಳು ಮತ್ತು ಹೊಲಗಾಲುವೆಗಳಲ್ಲಿ